**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಶಿಕ್ಷಣ ಇಲಾಖೆ,**

**ನೃಪತುಂಗ ರಸ್ತೆ, ಬೆಂಗಳೂರು – 560 001**

ಸಂಖ್ಯೆ : ಸಿ5(2)ಬಡ್ತಿ–25/2012–13 ದಿನಾಂಕ : 22–12–2012

***ಅಧಿಸೂಚನೆ***

ವಿಷಯ :– ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀಕ್ಷಕರುಗಳಿಗೆ ಸಹಾಯಕ ನಿರ್ದೇಶಕರು / ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಗೆ ಪದೋನ್ನತಿ ನೀಡುವ ಕುರಿತು.

ಉಲ್ಲೇಖ :– ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 12 ಎಸ್‌ಡಿಇ 2005 ದ: 29–01–2008.

2 :– ಸರ್ಕಾರದ ಆದೇಶ ಸಂಖ್ಯೆ : ಇಡಿ 464 ಡಿಪ್ಯೆ 2008 ದಿ : 06–01–2009.

3 :– ದಿನಾಂಕ : 18–12–2012 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭಾ ನಡವಳಿಗಳು.

4:– ದಿನಾಂಕ: 22–12–2012 ರಂದು ನಡೆದ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಅರ್ಹ ಅಧೀಕ್ಷಕರು ಭಾಗವಹಿಸಿ, ಸ್ಥಳ ಆಯ್ಕೆ ಮಾಡಿಕೊಂಡಿರುವಂತೆ.

* * * * * *

**ಪ್ರಸ್ತಾವನೆ :**

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಗ್ರೂಪ್ 'ಬಿ' ವೃಂದದ ಪತ್ರಾಂಕಿತ ವ್ಯವಸ್ಥಾಪಕರ / ಸಹಾಯಕ ನಿರ್ದೇಶಕರು(ಭೋದಕೇತರ) ವೃಂದಕ್ಕೆ ಉಲ್ಲೇಖಿತ (1) ರ ಸರ್ಕಾರದ ಆದೇಶದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರನ್ನು ನೇಮಕಾತಿ ಪ್ರಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿದೆ.

ಗ್ರೂಪ್ 'ಬಿ' ವೃಂದದ ಹುದ್ದೆಗಳಿಗೆ ಬಡ್ತಿಯನ್ನು ನೀಡುವ ಸಲುವಾಗಿ ಆಯುಕ್ತಾಲಯವಾರು ಇಲಾಖಾ ಮುಂಬಡ್ತಿ ಸಮಿತಿಯನ್ನು ಉಲ್ಲೇಖಿತ (2) ರ ಸರ್ಕಾರದ ಆದೇಶದಲ್ಲಿ ರಚಿಸಿ ಆದೇಶಿಸಲಾಗಿದೆ. ಅದರಂತೆ ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಪತ್ರಾಂಕಿತ ವ್ಯವಸ್ಥಾಪಕರ / ಸಹಾಯಕ ನಿರ್ದೇಶಕರು(ಭೋದಕೇತರ) ಹುದ್ದೆಯಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅಧೀಕ್ಷಕರ ಹುದ್ದೆಯಿಂದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಸಲುವಾಗಿ ದಿನಾಂಕ : 18–12–2012 ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಇಲಾಖಾ ಮುಂಬಡ್ತಿಯ ಸಭೆಯನ್ನು ನಡೆಸಲಾಯಿತು. ಸದರಿ ಸಭೆಯಲ್ಲಿ ದಿನಾಂಕ : 31–12–2012 ರ ಅಂತ್ಯಕ್ಕೆ ಖಾಲಿ ಇರುವ 10 ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ನೀಡಲು ನಿರ್ಧರಿಸಲಾಯಿತು.

ಬಡ್ತಿಗಾಗಿ ಅರ್ಹರಿರುವ ಅಧೀಕ್ಷಕರುಗಳಿಗೆ ಅವರೇ ಸ್ವತ: ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುವ ಸಲುವಾಗಿ ದಿನಾಂಕ : 22–12–2012 ರಂದು ಸ್ಥಳ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿ ಅರ್ಹ ನೌಕರರು ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿದ್ದು, ಅವರುಗಳಿಗೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಸಲುವಾಗಿ ಈ ಕೆಳಕಂಡ ಆದೇಶ.

**ಆದೇಶ :-**

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್ 'ಸಿ' ವೃಂದದ ವೇತನ ಶ್ರೇಣಿ ರೂ. 20000-36300 ರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಧೀಕ್ಷಕರುಗಳಿಗೆ ಗ್ರೂಪ್ 'ಬಿ' ವೃಂದದ ವೇತನ ಶ್ರೇಣಿ ರೂ. 21600-40050 ರ ಪತ್ರಾಂಕಿತ ವ್ಯವಸ್ಥಾಕರು / ಸಹಾಯಕ ನಿರ್ದೇಶಕರು(ಬೋಧಕೇತರ) ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ನೀಡಿ ಅವರುಗಳ ಹೆಸರಿನ ಮುಂದೆ ಸೂಚಿಸಲಾಗಿರುವ ಹುದ್ದೆ ಮತ್ತು ಸ್ಥಳಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶವಾಗುವವರೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

| ಕ್ರಮ ಸಂಖ್ಯೆ | ಜೇಷ್ಠತಾ ಸಂಖ್ಯೆ | ಅಧೀಕ್ಷಕರ ಹೆಸರು ಮತ್ತು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿಯ ಹೆಸರು ಮತ್ತು ವಿಳಾಸ | ಪತ್ರಾಂಕಿತ ವ್ಯವಸ್ಥಾಪಕರು / ಸಹಾಯಕ ನಿರ್ದೇಶಕರು ಹುದ್ದೆಗೆ ಸ್ಥಾನಪನ್ನ ಬಡ್ತಿಯನ್ನು ನೀಡಿ ಸ್ಥಳ ನಿಯುಕ್ತಿಗೊಳಿಸಿರುವ ಹುದ್ದೆ ಮತ್ತು ಕಛೇರಿಯ ವಿಳಾಸ |
|---|---|---|---|
| 1 | 21 | ಎಸ್.ಎನ್. ಸುರೇಶ್, ಅಧೀಕ್ಷಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು | ನಿರ್ದೇಶಕರ ಕಛೇರಿ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು (ಶಾಖಾ ಗ್ರಂಥಪಾಲಕರ ಹುದ್ದೆಯಿಂದ ವೃಂದ ಬದಲಾವಣೆಯಾದ ಹುದ್ದೆಗೆ) |
| 2 | 30 | ಟಿ.ವಿ. ಸರಸ್ವತಮ್ಮ, ಅಧೀಕ್ಷಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ,ಬೆಂಗಳೂರು | ಕ್ಷೇತ್ರ ಶಿಕ್ಷಣಾಧಿಕಾರಿಗಳ, ದೊಡ್ಡಬಳ್ಳಾಪುರ ತಾಲ್ಲುಕು, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ. (ದಿ: 31-12-2012 ಶ್ರೀ ಕಾಂತರಾಜಯ್ಯ ಇವರ ವಯೋನಿವೃತ್ತಿಯಿಂದ ತೆರವಾಗುವ ಹುದ್ದೆಗೆ) |
| 3 | 63 | ತಿಪ್ಪೇಸ್ವಾಮಿ .ಆರ್. ಅಧಿಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿತ್ರದುರ್ಗ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಪಾವಗಡ ತಾಲ್ಲೂಕು, ಪಾವಗಡ, ಮಧುಗಿರಿ ಶೈಕ್ಷಣಿಕ ಜಿಲ್ಲೆ. (ಶ್ರೀ ನಿಸಾರ್ ಅಹ್ಮದ್ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ) |
| 4 | 65 | ಆರಿಫ್ ಉಲ್ಲಾಖಾನ್, ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹಿರಿಯೂರು, ಚಿತ್ರದುರ್ಗ ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಮೈಸೂರು ಉತ್ತರ, ಮೈಸೂರು (ಶ್ರೀ ಜಯಪ್ರಕಾಶ್ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆ) |
| 5 | 66 | ವಿನೋಧ .ಎ., ಅಧೀಕ್ಷಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಗಳೂರು | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೆಳ್ತಂಗಡಿ ತಾಲ್ಲೂಕು, ಬೆಳ್ತಂಗಡಿ, ದಕ್ಷಿಣ ಕನ್ನಡ ಜಿಲ್ಲೆ (ಶ್ರೀ ನಾಗೇಶ್ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ) |

| | | | |
|---|---|---|---|
| 6 | 77 | ಜಿ.ವಿ. ಪ್ರಸಾದ್ ಬಾಬು, ಅಧೀಕ್ಷಕರು, ನಿಯೋಜನೆ ಮೇರೆಗೆ ಮಾನ್ಯ ಮುಖ್ಯ ಮಂತ್ರಿಗಳ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬಾಗೇಪಲ್ಲಿ ತಾಲ್ಲುಕು, ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ (ಶ್ರೀ ಬಸವರಾಜಪ್ಪ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆ) |
| 7 | 79 | ಶಾಂತರಾಜು ಬಿ.ಎಸ್., ಅಧೀಕ್ಷಕರು, ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹರಪನಹಳ್ಳಿ ತಾಲ್ಲುಕು, ಹರಪನಹಳ್ಳಿ, ದಆವಣಗೆರೆ ಜಿಲ್ಲೆ, (ಶ್ರೀಮತಿ ಮುದ್ದುರತ್ನಮ್ಮ ಇವರನ್ನು ನಿಯೋಜಿಸಿ ವರ್ಗಾಯಿಸಿರುವುದರಿಂದ ತೆರವಾದ ಹುದ್ದೆಗೆ) |
| 8 | 80 | ಬಸವರಾಜು ಟಿ.ಎಂ., ಅಧೀಕ್ಷಕರು, ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಚಾಮರಾಜನಗರ ತಾಲ್ಲೂಕು, ಮತ್ತು ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೆ.ಆರ್. ನಗರ ತಾಲ್ಲೂಕು, ಮೈಸೂರು ಜಿಲ್ಲೆ (ದಿನಾಂಕ:31-12-2012 ಶ್ರೀ ಬಸವರಾಜು ಇವರ ವಯೋನಿವೃತ್ತಿಯಿಂದ ತೆರವಾಗುವ ಹುದ್ದೆಗೆ) |
| 9 | 81 | ಉಷಾದೇವಿ ಹೆಚ್.ಎಸ್. ಅದೀಕ್ಷಕರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಹೊಳೇನರಸೀಪುರ ತಾಲ್ಲುಕು, ಹಾಸನ ಜಿಲ್ಲೆ (ಶ್ರೀ ದಯಾನಂದ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆ) |
| 10 | 141 | ಅಂಜನಪ್ಪ .ಕೆ. ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ರಾಮನಗರ ಜಿಲ್ಲೆ, ರಾಮನಗರ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೈಂದೂರು ತಾಲ್ಲುಕು, ಬೈಂದೂರು, ಉಡುಪಿ ಜಿಲ್ಲೆ (ಶ್ರೀ ಡಿ. ರಾಘವೇಂದ್ರ ರಾವ್ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ) |

ಈ ಆದೇಶ ಜಾರಿಯಾದ 15 ದಿನಗಳ ಒಳಗಾಗಿ ಸ್ಥಾನಪನ್ನ ಬಡ್ತಿಯನ್ನು ಹೊಂದಿದ ಅಧಿಕಾರಿಗಳು, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಿಂದ ಬಿಡುಗಡೆ ಹೊಂದಿ ಬಡ್ತಿಯನ್ನು ನೀಡಿರುವ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಲು ಈ ಮೂಲಕ ಆದೇಶಿಸಲಾಗಿದೆ.

(ಆಯುಕ್ತರ ಆದೇಶದ ಮೇರೆಗೆ)

(ವಿ.ಜಿ.ದಿವಾಕರ್)
ಅಪರ ಆಯುಕ್ತರು (ಆಡಳಿತ)

ಇವರಿಗೆ:

1) ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ Ink Signed Copy.
3) ಸಂಬಂಧಿಸಿದ ಜಿಲ್ಲಾ ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಗಳಿಗೆ.